<u>ಸಾಕ್ಷಿಯನ್ನು ದಿಃ**02.07.2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಬಿ.ಜಿ.ಆರ್. ವಕೀಲರಿಂದ:</u>

ನಾನು 10 ನೇ ತರಗತಿ ನಪಾಸು ಆಗಿರುತ್ತೇನೆ. ವಾದಿಯು ಹೊನ್ನೇಗೌಡನ ದೊಡ್ಡಿ ಗ್ರಾಮದಲ್ಲಿ ಅಂಗನವಾಡಿ ಶಿಕ್ಷಕಿಯಾಗಿರುತ್ತಾರೆ. ವಾದಿಯು ತನ್ನ ಕೆಲಸಕ್ಕೆ ಹೋಗುತ್ತಿದ್ದಾರೆ. ವಾದಿಯು ನನ್ನ ಹೆಂಡತಿಯಾಗಬೇಕು. ವಾದಿಯು ನನ್ನ ದೊಡ್ಡಪ್ಪನ ಮಗನ ಬಳಿ ಜಮೀನು ಖರೀದಿಸಿದ್ದರಿಂದ ಈ ದಾವೆ ಹೂಡಿರುತ್ತಾರೆ. ದಾವಾ ಆಸ್ತಿಯ ಪೂರ್ವಕ್ಕೆಃ ರಸ್ತೆ, ಪಶ್ಚಿಮಕ್ಕೆಃ ಪುಟ್ಟಸ್ವಾಮಿರವರ ಜಮೀನು, ಉತ್ತರಕ್ಕೆಃ ಪುಟ್ಟಸ್ವಾಮಿರವರ ಜವೀನು ಮತ್ತು ದಕ್ಷಿಣಕ್ಕೆಃ ರಸ್ತೆ ಇದೆ. ದಾವಾ ಆಸ್ತಿಯ ಉತ್ತರಕ್ಕೆ ಕಪನಯ್ಯರವರ ಮನೆ ಇರುತ್ತದೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸರ್ವೇ ನಂಬರ್ ನಲ್ಲಿ 1 ಎಕರೆ 28 ಗುಂಟೆ ಇತ್ತು. ಪುಟ್ಟಸ್ವಾಮಿರವರು ನಮ್ಮನ್ನು ಹೊರತು ಪಡಿಸಿ ಬೇರೆ ಯಾರಿಗೂ ದಾವಾ ಸರ್ವೇ ನಂಬರ್ ನಲ್ಲಿ ಮಾರಾಟ ಮಾಡಿರುವುದಿಲ್ಲ. ಈ ದಾವೆಯಲ್ಲಿ ಪಶ್ಚಿಮಕ್ಕೆ ಮತ್ತು ಉತ್ತರಕ್ಕೆ ಪುಟ್ಟಸ್ವಾಮಿರವರ ಜಮೀನು ಇದೆ ಎಂದು ಚೆಕ್ಕು ಬಂದಿಯಲ್ಲಿ ಬರೆಸಿರುತ್ತೇವೆ. ಆ ರೀತಿ ಚೆಕ್ಕು ಬಂದಿಯಲ್ಲಿ ಬರೆಯದಿದ್ದರೂ ಬರೆದಿದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದ ಪತ್ರದ ಐಟಂ ನಂ.1 ಮತ್ತು 2 ರ ಆಸ್ತಿಗಳನ್ನು ನಾನು ನೋಡಿರುವುದಿಲ್ಲ. ಪ್ರತಿವಾದ ಪತ್ರದ ಐಟಂ ನಂ.1 ಮತ್ತು 2 ರ ಆಸ್ತಿಗಳು ಪುಟ್ಟಸ್ವಾಮಿರವರಿಗೆ ಸೇರಿದ್ದಾಗಿರುತ್ತದೆ. ಸದರಿ ಆಸ್ತಿಗಳು ಪುಟ್ಟಸ್ವಾಮಿರವರ ಹೆಸರಿನಲ್ಲಿ ಖಾತೆ ಇರುತ್ತದೆ. ದಾವಾ ಆಸ್ತಿಯಲ್ಲಿ ಪೆಟ್ಟಿಗೆ ಅಂಗಡಿ ಹಾಕಿಕೊಂಡು, ಶೀಟು ಹಾಕಿ, ದನ, ಎಮ್ಮೆಗಳನ್ನು

ಕಟ್ಟಿಕೊಂಡಿದ್ದೇನೆ. ದಾವಾ ಆಸ್ತಿಯಲ್ಲಿ 50 ವರ್ಷಗಳಿಂದಲೂ ನಾನೇ ಸ್ವಾಧೀನಾನುಭವದಲ್ಲಿದ್ದೇನೆ. ಪೆಟ್ಟಿಗೆ ಅಂಗಡಿ ಹಾಗೂ ಶೀಟನ್ನು ದಾವಾ ಆಸ್ತಿ ನಮ್ಮ ಹೆಸರಿಗೆ ನೊಂದಣಿ ಆದ ಸಮಯದಲ್ಲಿ ಹಾಕಿರುತ್ತೇನೆ. ನಾನು ಪೆಟ್ಟಿಗೆ ಅಂಗಡಿ ಹಾಗೂ ಶೀಟು ಹಾಕಿ, ದನ, ಎಮ್ಮೆಗಳನ್ನು ಕಟ್ಟಿರುವ ವಿಚಾರ ನಮ್ಮ ವಕೀಲರಿಗೆ ಹೇಳಿ ದಾವೆಯಲ್ಲಿ ಬರೆಸಿರುತ್ತೇನೆ. ದಾವಾ ಆಸ್ತಿಯಲ್ಲಿ ವಾದಿಯು ಸ್ವಾಧೀನಾನುಭವದಲ್ಲಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದ ಪತ್ರದ ಐಟಂ ನಂ.2 ರ ಆಸ್ತಿಯ ಕುರಿತು 1 ನೇ ಪ್ರತಿವಾದಿ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ನಂ.477/2017 ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿ 1 ನೇ ಪ್ರತಿವಾದಿಯ ಪರ ತಾತ್ಕಾಲಿಕ ನಿರ್ಬಂಧಕಾಜ್ಞೆ ಮಂಜೂರಾಗಿರುತ್ತದೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದ ಪತ್ರದ ಐಟಂ.ನಂ. 2 ರ ಆಸ್ತಿಯಲ್ಲಿ ಮೊದಲು ಹಳೆ ಮನೆ ಇದ್ದು, ಈಗ ಅದು ಬಿದ್ದು ಹೋಗಿ ಖಾಲಿ ಜಾಗ ಇರುತ್ತದೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದ ಪತ್ರದ ಐಟಂ ನಂ.1 ಮತ್ತು 2 ರ ಆಸ್ತಿಗಳು 1 ನೇ ಪ್ರತಿವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ಪ್ರತಿವಾದ ಪತ್ರದ ಐಟಂ ನಂ.1 ರ ಆಸ್ತಿಯ ಕುರಿತು 1 ನೇ ಪ್ರತಿವಾದಿ ಇದೇ ನ್ಯಾಯಾಲಯದಲ್ಲಿ ನಮ್ಮ ವಿರುದ್ಧ ಅಸಲು ದಾವಾ ನಂ.478/2017 ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿ 1 ನೇ ಪ್ರತಿವಾದಿಯ ಪರ ತಾತ್ಕಾಲಿಕ ನಿರ್ಬಂಧಕಾಜ್ಞೆ ಮಂಜೂರಾಗಿರುತ್ತದೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಪುಟ್ಟಸ್ವಾಮಿರವರಿಗೆ ಸೇರಿಲ್ಲ ಎಂದರೆ ಸರಿಯಲ್ಲ. ಸುಮಾರು 50

ವರ್ಷಗಳಿಂದ ನಾನೇ ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿದ್ದೇನೆ ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಚೆಕ್ಕು ಬಂದಿಯನ್ನು ನೀಡಿ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿ ಸ್ವಾಧೀನಾನುಭವದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ವಾದಿ ಕೊಂಡುಕೊಳ್ಳುವ ವೇಳೆಗೆ ಪಶ್ಚಿಮ ಹಾಗೂ ಉತ್ತರಕ್ಕೆ ಪುಟ್ಟಸ್ವಾಮಿರವರ ಜಮೀನು ಇತ್ತು. ಮರು ವಿಚಾರಣೆ ಇಲ್ಲ.

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.